ತುರುವೇಕೆರೆ ತಾಲ್ಲೂಕಿನಲ್ಲಿ ಪಶು ಚಿಕಿತ್ಸಾಲಯ

1086 (1135) ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ತುರುವೇಕೆರೆ) : ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕಿನಲ್ಲಿ ಎಷ್ಟು ಪಶು ಚಿಕಿತ್ಸಾಲಯಗಳಿವೆ?

ಆ) ಈ ಚಿಕಿತ್ಸಾಲಯಗಳನ್ನು ಪಶುವೈದ್ಯಕೀಯ ಆಸ್ಪತ್ರೆಗತ ಏರಿಸುವ ಉದ್ದೇಶ ಸರ್ಕಾರದ ಮುಂದೆ ಇದೆಯೇ?

ಇ) ತುರುವೇಕೆರೆ ತಾಲ್ಲೂಕಿನಲ್ಲಿ ಜಾನುವಾರು ಸಂಖ್ಯೆ ತಕ್ಕಂತೆ ಹೊಸದಾಗಿ ಎಷ್ಟು? ಪಶು ಚಿಕಿತ್ಸಾಲಯ ಮಂಜೂರಾಗಿವೆ?

ಈ) ಹಾಗಿದ್ದಲ್ಲಿ ಈ ವರ್ಷ ಎಷ್ಟು ಪಶು ಚಿಕಿತ್ಸಾಲಯ ಪ್ರಾರಂಭಿಸಲು ಸರ್ಕಾರದಿಂದ ಅನುಮೋದನೆ ದೊರೆತಿದೆ?

ಶ್ರೀ ಎ. ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು) :

ಅ) ಒಟ್ಟು 3 ಪಶು ಚಿಕಿತ್ಸಾಲಯಗಳಿವೆ (ದಂಡಿನಶಿವರ, ಬಾಣಸಂದ್ರ ತಂಡಗ)

ಆ) ಇಲ್ಲ

ಇ) ಜಾನುವಾರು ಸಂಖ್ಯೆಗೆ ತಕ್ಕಂತೆ ಈಗಾಗಲೇ ಪಶು ಚಿಕಿತ್ಸಾಲಯಗಳು ಇರುತ್ತವೆ, ಆದುದರಿಂದ ಹೊಸದಾಗಿ ಮಂಜೂರಾಗಿರುವುದಿಲ್ಲ

ರಾಜ್ಯೋತ್ಸವ ಪ್ರಶಸ್ತಿ ವಿತರಣೆ

1087 (1136) ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ತುರುವೇಕೆರೆ) : ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕಿನಲ್ಲಿ ಸುಮಾರು 12 ವರ್ಷಗಳಿಂದ ಸಾಮಾಜಿಕ ಸೇವೆಯಲ್ಲಿ ತೊಡಗಿ ಉಚಿತವಾಗಿ ಸಾವಿರಾರು ಜನರಿಗೆ ಕಣ್ಣು ಕೊಡಿಸಿರುವ ವ್ಯಕ್ತಿಗೆ ಈ ಸಾಲಿನಲ್ಲಿ ರಾಜ್ಯೋತ್ಸವ ಪ್ರಶಸ್ತಿ ಕೊಡಲು ಸರ್ಕಾರವೇನಾದರೂ ತೀರ್ಮಾನಿಸಿದೆಯೇ?

ಆ) ಹಾಗಿದ್ದಲ್ಲಿ ಈ ವರ್ಷ ಪ್ರಶಸ್ತಿ ಪಡೆಯಲು ಸಂಬಂಧಪಟ್ಟವರು ಮನವಿ ಮಾಡಿಕೊಳ್ಳಬಹುದೇ?

ಇ) ಸಾಮಾನ್ಯವಾಗಿ ಇಂತಹ ವ್ಯಕ್ತಿಗಳನ್ನು ಗುರುತಿಸಿ ರಾಜ್ಯೋತ್ಸವ ಪ್ರಸಸ್ತಿ ಕೊಡುವ ಬಗ್ಗೆ ಸರ್ಕಾರದ ಮಾನದಂಡವೇನು?

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ಇಲಾಖಾ ರಾಜ್ಯ ಸಚಿವೆಯವರು):

ಅ) ಇಲ್ಲ

ಆ) ಮನವಿ ಸಲ್ಲಿಸಿದ ವ್ಯಕ್ತಿಗಳಿಗೆ ಮಾತ್ರ ಪ್ರಶಸ್ತಿ ನೀಡುತ್ತಿಲ್ಲ ಆದರೂ ಮನವಿ ಸಲ್ಲಿಸಿದಲ್ಲಿ ಪ್ರಶಸ್ತಿ ಆಯ್ಕೆ ಸಲಹಾ ಸಮಿತಿ ಪರಿಶೀಲಿಸುವುದು

ಇ) 1. ರಾಜ್ಯ ಪ್ರಶಸ್ತಿಗೆ ಅರ್ಹರನ್ನು ಆಯ್ಕೆ ಮಾಡಲು ಮಾನ್ಯ ಇಲಾಖಾ ಸಚಿವರು ಅಧ್ಯಕ್ಷತೆಯಲ್ಲಿ ರಾಜ್ಯದ ವಿವಿಧ ಅಕಾಡೆಮಿಗಳ ಅಧ್ಯಕ್ಷರು ಸದಸ್ಯರಾಗಿರುವ ಆಯ್ಕೆ ಸಲಹಾ ಸಮಿತಿಯನ್ನು ಸರ್ಕಾರ ಮೊದಲು ರಚಿಸುತ್ತದೆ.

2. ಸಾಂಸ್ಕೃತಿಕ ಸಾಹಿತ್ಯ, ಸಾಮಾಜಿಕ ಸೇವೆ, ಕ್ರೀಡೆ, ವೈದ್ಯಕೀಯ, ಶಿಕ್ಷಣ ಮುಂತಾದ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಗಣ್ಯರ ಸಾಧನೆಗಳನ್ನು ಪರಿಶೀಲಿಸಿ ಅರ್ಹರ ಆಯ್ಕೆಯನ್ನು ಮಾಡಿ ಸರ್ಕಾರಕ್ಕೆ ಸಲ್ಲಿಸುತ್ತದೆ.

3. ಸರ್ಕಾರ ಪರಿಶೀಲನಾ ಸಲಹಾ ಸಮಿತಿಯ ಆಯ್ಕೆ ಪಟ್ಟಿಯನ್ನು ಪರಿಶೀಲಿಸಿ ಪ್ರಶಸ್ತಿಗೆ ಅರ್ಹರನ್ನು ಆಯ್ಕೆ ಮಾಡಿ ಸರ್ಕಾರದ ಆದೇಶ ಹೊರಡಿಸಲಾಗುತ್ತಿದೆ.

ತುರುವೇಕೆರೆ ತಾಲ್ಲೂಕಿನ ರಾಜ್ಯ ಹೆದ್ದಾರಿ ಹಾಗೂ ಎಂ.ಡಿ.ಆರ್ ರಸ್ತೆಗಳ ದುರಸ್ತಿ :

1088 (1569) ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ (ತುರುವೇಕೆರೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕಿನಲ್ಲಿ ರಾಜ್ಯ ಹೆದ್ದಾರಿ ಹಾಗೂ ಎಂ.ಡಿ.ಆರ್ ರಸ್ತೆಗಳಲ್ಲಿ ತುಂಬ ವಾಹನಗಳು ಸಂಚಾರ ಮಾಡುತ್ತಿದ್ದು, ಇತ್ತೀಚಿನ ದಿನಗಳಲ್ಲಿ ರಸ್ತೆಗಳು ತುಂಬ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ರಸ್ತೆಯ ಎಡ ಮತ್ತು ಬಲಭಾಗಕ್ಕೆ ಗುಂಡಿಗಳು ಬಿದ್ದಿದ್ದು ವಾಹನಗಳ ಸಂಚಾರಕ್ಕೆ ತುಂಬಾ ತೊಂದರೆಯಾಗಿದ್ದು ಇದನ್ನು ಸರಿಪಡಿಸುವಲ್ಲಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಇ) ರಸ್ತೆಗಳ ರಿಪೇರಿಗೆಂದು 1998-1999, 1999-2000, 2000-2001ನೇ ಸಾಲಿಗೆ ಎಷ್ಟು ಹಣ ಬಿಡುಗಡೆ ಮಾಡಿದೆ ಎಷ್ಟು ಖರ್ಚಾಗಿದೆ? ಯಾವ ಯಾವ ರಸ್ತೆಗಳನ್ನು ರಿಪೇರಿ ಮಾಡಲಾಗಿದೆ? (ತುರುವೇಕೆರೆ ತಾಲ್ಲೂಕಿಗೆ ಸಂಬಂಧಪಟ್ಟಂತೆ ಮಾಹಿತಿ ನೀಡುವುದು)

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಲೋಕೋಪಯೋಗಿ ಇಲಾಖೆಯ ರಸ್ತೆಗಳ ಶೀಘ್ರ ದುರಸ್ತಿಯ ಅವಶ್ಯಕತೆ ಸರ್ಕಾರದ ಗಮನಕ್ಕೆ ಬಂದಿದೆ.

ಆ) ಈ ದುರಸ್ಥಿ ಕಾರ್ಯವನ್ನು ತ್ವರಿತವಾಗಿ ಕೈಗೆತ್ತಿಕೊಂಡಿದ್ದು ಮಾರ್ಚ್ 2001ರ ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದು

ಇ) ವಿವರಗಳನ್ನು ಅನುಬಂಧ - 1 ರಲ್ಲಿ ಒದಗಿಸಲಾಗಿದೆ.